ಪುಕ್ಕಟೆ ಗ್ರಂಥಾಲಯ

ಲೇಃ ಸಾರಾ ಸ್ಟ್ಯುವರ್ಟ್
ಕನ್ನಡಕ್ಕೆಃಪ್ರಭಾಕರ ನಾನಾವಟಿ








ಎಲಿಝಾಬೆಥ್ ಬ್ರಾವುನ್
ಆಗಸದಿಂದಲೇ ಇಳಿದುಬಿಟ್ಟಂತೆ
ಈ ಜಗತ್ತಿನಲ್ಲಿ ಪ್ರವೇಶಿಸಿದಳು.
ಎಲಿಝಾಬೆಥ್ ಬ್ರಾವುನ್
ತೆಳ್ಳನೆಯ, ನಾಚಿಕೆಯಿಂದ ತಲೆ ಕೆಳ ಮಾಡುವ,
ಅಧುದೃಷ್ಟಿಯುಳ್ಳವಳಾಗಿಯೇ
ಈ ಜಗತ್ತಿನಲ್ಲಿ ಕಾಲಿಟ್ಟಳು.







ಅವಳೆಂದೂ ಗೊಂಬೆಗಳ ಜೊತೆ ಆಡಲಿಲ್ಲ.
ಅವಳೆಂದೂ ಹಿಮಬಂಡೆಗಳ ಮೇಲೆ ಸ್ಕೇಟಿಂಗ
ಮಾಡಲಿಲ್ಲ.
ಅವಳು ಚಿಕ್ಕಂದಿನಲ್ಲಿಯೇ ನಂಬಲಿಕ್ಕೂ
ಶಕ್ಯವಾಗದ ಸ್ಪೀಡಿನಿಂದ ಓದಲು ಕಲಿತಳು.



ಅವಳು ಹಾಸಿಗೆಯ ಹೊದಿಕೆಯಲ್ಲಿಯೇ
ಟಾರ್ಚಲಾಯಿಟನ್ನು ಬೆಳಗಿಸಿ
ಪುಸ್ತಕಗಳ ಮೇಲೆ ಕಣ್ಣು ಹಾಯಿಸುತ್ತಿದ್ದಳು.
ಹೊದಿಕೆಯ ಡೇರೆಯೊಳಗೆ ಓದುತ್ತಲೇ ಮಲಗುತ್ತಿದ್ದಳು



ಎಲಿಝಾಬೆಥ್ ಬ್ರಾವುನ್
ಒಂದು ದೊಡ್ಡ ಪೆಟ್ಟಿಗೆಯನ್ನು ಎಳೆಯುತ್ತಲೇ
ಶಾಲೆಗೆ ಹೋಗುತ್ತಿದ್ದಳು.



ಎಲಿಝಾಬೆಥ್ ಬ್ರಾವುನ್
ಕಟ್ಟಿಟ್ಟ ಪುಸ್ತಕಗಳನ್ನೆಲ್ಲ ಹೊರತೆಗೆದು ಕವರನ್ನು
ಬೇರ್ಪಡಿಸುತ್ತಿದ್ದಳು. ಮಂಚದ ಮೇಲೆ ಪುಸ್ತಕಗಳನ್ನಿಟ್ಟಾಗ
ಅದರ ತೂಕದಿಂದ ಮಂಚ ಮುರಿದು ಹೋಯಿತು.



ಕ್ಲಾಸಿನಲ್ಲಿ ಕುಳಿತಾಗ ಕಾಗದದ ಮೇಲೆ ಏನೇನನ್ನೋ
ಗೀಚುತ್ತ
ಓದುಗರ ಆಲೆಂಪಿಕ್ ಸ್ಪರ್ಧೆಯ ಕನಸನ್ನು ಕಾಣುತ್ತಿದ್ದಳು



ಅವಳು ಎರವಲಾಗಿ ಕೊಟ್ಟ ಪುಸ್ತಕಗಳ ಲಾಯಬ್ರರಿಯ
ಕಾರ್ಡುಗಳನ್ನು ತಯಾರಿಸುತ್ತಿದ್ದಳು.
ಗೆಳತಿಯರಿಗೆ ಕೊಟ್ಟ ಪುಸ್ತಕಗಳನ್ನು ಮರಳಿ ತರಲು
ನಡುರಾತ್ರಿಯಲ್ಲಿ ಅವರ ಮನೆಗೆ ಹೋಗಿ ಅವರನ್ನು
ಗಾಬರಿಗೊಳಿಸುತ್ತಿದ್ದಳು.





ಗೆಳೆಯರ ಜೊತೆ ಹೋಗುವದಕ್ಕಿಂತ ಪುಸ್ತಕಗಳ ಜೊತೆ ಇರುವದು ಅವಳಿಗೆ ಹಿಡಿಸುತ್ತಿತ್ತು.
ಗೆಳತಿಯರು ಇಡೀ ರಾತ್ರಿ ಕುಣಿಯಲಿಕ್ಕೆಂದು ಹೊರಬೀಳುತ್ತಿದ್ದರೆ ಇವಳು ಮಾತ್ರ ಬೆಳಗಾಗುವ ವರೆಗೆ ಓದುತ್ತ ಕೂಡುತ್ತಿದ್ದಳು.









ಒಂದು ದಿನ ಟ್ರೇನಿನಲ್ಲಿ ಕುಳಿತು ಹೋದಾಗ ದಾರಿ ತಪ್ಪಿದಳು. ಅಲ್ಲಿಯೇ ಒಂದು ಮನೆ ಖರೀದಿಸಿ ಟ್ಯೂಶನ್ ಹೇಳುತ್ತ ಸಾಲವನ್ನು ಮುಟ್ಟಿಸತೊಡಗಿದಳು.

.





ಎಲಿಝಾಬೆಥ್ ಬ್ರಾವುನ್
ಬೇಸಿಗೆ, ಮಳೆಗಾಲ, ಚಳಿಗಾಲದಲ್ಲಿ ಕೂಡ ಪಟ್ಟಣದ ಬೀದಿಗಳಲ್ಲಿ
ತಿರುಗಾಡುತ್ತಿದ್ದಳು..
ಎಲಿಝಾಬೆಥ್ ಬ್ರಾವುನ್
ಅವಳಿಗೆ ಒಂದೇ ವಸ್ತು ಬೇಕಾಗುತ್ತಿತ್ತು. ಅದರ ಶೋಧಕ್ಕಾಗಿ
ಪಟ್ಟಣದಲ್ಲಿ ಅಲೆದಾಡುತ್ತಿದ್ದಳು
ಅವಳಿಗೆ ಆಲೂಗಡ್ಡೆಯ ಚಿಪ್ ಬೇಕಿರಲಿಲ್ಲ.
ಅವಳಿಗೆ ಹೊಸ ಉಡುಪುಗಳು ಬೇಕಿರಲಿಲ್ಲ.
ಅವಳು ನೇರವಾಗಿ ಪುಸ್ತಕದ ಅಂಗಡಿಗೆ ಹೋಗಿ
‘ಇದನ್ನು ತೆಗೆದುಕೊಳ್ಳಬಹುದೇ?” ಎಂದು ಕೇಳುತ್ತಿದ್ದಳು.



ಎಲಿಝಾಬೆಥ್ ಬ್ರಾವುನ್
ಮನೆಗೆ ತಿರುಗಿ ಬಂದು
ಓದು, ಓದು, ಓದು....
ಮತ್ತೇನಿಲ್ಲ.






ಅವಳು ತಲೆ ಕೆಳಗೆ ಕಾಲು ಮೇಲೆ ಮಾಡುವ
ವ್ಯಾಯಾಮ ಮಾಡುವಾಗ ಕೂಡ ಓದುತ್ತಿದ್ದಳು.





ಅವಳು ಅಂಗಡಿಯಿಂದ ಕೊಳ್ಳಬೇಕಾದ ಸಾಮಾನುಗಳ
ಪಟ್ಟಿ ಮಾಡಿ ಪುಸ್ತಕದಲ್ಲಿ ಇಡುತ್ತಿದ್ದಳು.
ಹಣ್ಣು ಕೊಳ್ಳುವಾಗ ಪಟ್ಟಿಯು ಕಳೆದು ಹೋಯಿತು. ಆ
ದಿನ ಅಡಿಗೆಗೆ ಸಾಮಾನುಗಳೇ ಇಲ್ಲ.

ಅವಳು ಮನೆಯಲ್ಲಿ ಕಸಗೂಡಿಸುವಾಗ ಗ್ರೀಕ್
ದೇವತೆಗಳ ಬಗ್ಗೆ ಓದಿದಳು.
ಪುಸ್ತಕಕ್ಕಾಗಿಯೇ ಅವಳ ಎಲ್ಲ ಚಟುವಟಿಕೆಗಳು.







ಪುಸ್ತಕಗಳೆಲ್ಲ ಕುರ್ಚಿಗಳ ಮೇಲೆ
ನೆಲದ ಮೇಲೆಲ್ಲ ಹರಡಿ ಎಲ್ಲೆಡೆ ಚೆಲ್ಲಾಪಿಲ್ಲಿ.
ಕಪಾಟುಗಳೆಲ್ಲ ತುಂಬಿ ಹೊರಚೆಲ್ಲಿದ ಹಾಗೆ.
ಆದರೂ ಅವಳು ಮತ್ತಷ್ಟು ಓದುತ್ತಲೇ ಇದ್ದಳು.
ದೊಡ್ಡ ಪುಸ್ತಕಗಳೆಲ್ಲ ಗಟ್ಟಿಯಾದ ಅಡ್ಡಮಣೆಗಳಿದ್ದಂತೆ ಕಾಫಿ,
ಚಹದ ಕಪ್ಪುಗಳನ್ನು ಅವುಗಳ ಮೇಲೆ ಇಡಬಹುದು.
ಚಿಕ್ಕ ಪುಸ್ತಕಗಳ ಗಂಟಿನ ಮೇಲೆ ಚಿಕ್ಕ ಓದುಗರು
ಕುಳಿತುಕೊಳ್ಳಬಹುದು.






ಹೊತ್ತಿಗೆಗಳು ಗೋಡೆ ಹತ್ತಿ ಛತ್ತನ್ನೇ
ಮುಟ್ಟಿದಾಗ ಮತ್ತು ಹೊರಬಾಗಿಲನ್ನೇ
ತಡೆಗಟ್ಟಿದಾಗ ಅವಳು ಸಾಕಷ್ಟು ತೊಂದರೆಗೆ
ಈಡಾಗಬೇಕಾಯಿತು. ಆಗ ಮಾತ್ರ
ಇನ್ನೊಂದು ಪುಸ್ತಕ ಇಡುವದೇ
ಶಕ್ಯವಾಗಲಿಲ್ಲ.


ಎಲಿಝಾಬೆಥ್ ಬ್ರಾವುನ್
ಅದೇ ಮಧ್ಯಾನ್ಹ ಪಟ್ಟಣಕ್ಕೆ ಹೋದಳು.


ಎಲಿಝಾಬೆಥ್ ಬ್ರಾವುನ್
ಸಿಳ್ಳು ಹಾಕುತ್ತ ಪಟ್ಟಣದ ಬೀದಿಗಳಲ್ಲಿ
ತಿರುಗಾಡಿದಳು.
ಅವಳಿಗೆ ಬೈಸಿಕಲ್ ಬೇಕಿರಲಿಲ್ಲ.
ಅವಳಿಗೆ ರೇಶಿಮೆ ವಸ್ತ್ರಗಳು ಬೇಕಿರಲಿಲ್ಲ.
ನೇರವಾಗಿ ಕೋರ್ಟಿಗೆ ಹೋಗಿ "ಇದನ್ನು
ತೆಗೆದುಕೊಳ್ಳಬಹುದೇ?" ಎಂದು ಕೇಳುತ್ತ
ಅಲ್ಲಿಯ ಫಾರ್ಮ್ ನ್ನು ತಂದಳು.

ಫಾರ್ಮ್ ದಾನಕ್ಕಾಗಿ.
ಅವಳು ಅದರ ಮೇಲೆ ನಾನು,
"ಆಯ್. ಇ. ಬ್ರಾವುನ್, ನನ್ನದೇನಿದೇ
ಅದೆಲ್ಲವನ್ನು ಈ ಪಟ್ಟಣಕ್ಕೆ
ಕೊಡುತ್ತಲಿದ್ದೇನೆ. " ಎಂದು ಬರೆದಳು.








ಎಲಿಝಾಬೆಥ್ ಬ್ರಾಉನ್
ಪುಕ್ಕಟೆ ಗ್ರಂಥಾಲಯ






ಎಲಿಝಾಬೆಥ್ ಬ್ರಾವುನ್
ಆಮೇಲೆ ತನ್ನ ಗೆಳತಿಯ ಜೊತೆ ಅವಳು ಹಣ್ಣು ಹಣ್ಣು
ಮುದುಕೆಯಾಗುವ ವರೆಗೆ ಸಾಕಷ್ಟು ವಯಸ್ಸಿದ್ದಳು



ಅವರಿಬ್ಬರು ಪ್ರತಿ ದಿನ ಗ್ರಂಥಾಲಯಕ್ಕೆ ಹೋಗುತ್ತಿದ್ದರು.
ಅಲ್ಲಿ ಪುಸ್ತಕದ ಪುಟಗಳನ್ನು ಒಂದಾದ ಮೇಲೆ ಒಂದರಂತೆ
ತಿರುಗಿಸುತ್ತ .....





ಒಂದಾದ ಮೇಲೆ ಒಂದರಂತೆ ತಿರುಗಿಸುತ್ತ.....

ಒಂದಾದ ಮೇಲೆ ಒಂದರಂತೆ ತಿರುಗಿಸುತ್ತ.....